ಎಂವಿಸಿ ನಂಃ 507/2023

ಪಿ.ಡಬ್ಲೂ 1

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.**

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **04.06.2025**

**ಪಾಟೀಸವಾಲುಃ 1 ನೇ ಎದುರುದಾರರ ಪರ ವಕೀಲರಿಂದ**

1. ನನ್ನ ಮಗ ಹುಬ್ಬಳ್ಳಿ ವಿದ್ಯಾನಗರದ ಕೆ ಎಲ್ ಇ ಪ್ರೇರಣಾ ಕಾಲೇಜಿನಲ್ಲಿ ಪಿಯು ಕಾಮರ್ಸ ಓದುತಿತದ್ದ ಎಂದರೆ ಸರಿ. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಅದರೇ ಅದು ವಿದ್ಯಾನಗರದಲ್ಲಿ ಆಗಿರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದ 3 ನೇ ಪ್ಯಾರಾದಲ್ಲಿ ಅಪಘಾತವು ಕಿಮ್ಸು ಆಸ್ಪತ್ರೆಯ ಎದುರಿಗೆ ಆಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ಅಪಘಾತ ಕಾರು ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ.

2. ನನ್ನ ಮಗ ಎಸ್ ಪಿ ಆಟೊ ಮೊಬೈಲ್ಸನಲ್ಲಿ ಕೆಲಸ ಮಾಡುತಿತದ್ದ ಹಾಗೂ ಆತನಿಗೆ ತಿಂಗಳಿಗೆ 20 ಸಾವಿರ ವೇತನ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಅಪಘಾತವಾದ ದಿನ ನನ್ನ ಮಗ ಹಾಗೂ ಆತನ ಇಬ್ಬರು ಸ್ನೆಹಿತರು ಚಹಾ ಕುಡಿಯಲು ಹೊಗಿದ್ದರು ಎಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ಜೆಬ್ರಾ ಕ್ರಾಸ ಇರಲಿಲ್ಲ ಎಂದರೆ ಸರಿ. ಸದರಿ ಸ್ಥಳ ಇಳಿಜಾರು ರಸ್ತೆ ಎಂದರೆ ಸರಿ. ಆದ್ದರಿಂದ ಅಲ್ಲಿ ವಾಹನಗಳು ನಿದಾನವಾಗಿ ಚಲಿಸುತ್ತವೆ

ಎಂವಿಸಿ ನಂಃ 507/2023

ಪಿ.ಡಬ್ಲೂ 1

ಎಂದರೆ ಸರಿ. ಆದರೇ ಕಾರು ಚಾಲಕ ಆ ದಿನ ಜೊರಾಗಿ ಓಡಿಸಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಸ್ಥಳದಿಂದ 20 ಅಡಿ ದೂರದಲ್ಲಿ ಒಂದು ಕ್ರಾಸ ಇದೆ ಎಂದರೆ ಸರಿ. ಸದರಿ ಅಪಘಾತ ಕಾರು ಚಾಲಕನ ನಿರ್ಲಕ್ಷತನದಿಂದ ಆಗಿಲ್ಲ ಅದು ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನಾನು ಪರಿಹಾರಕ್ಕಾಗಿ ಕಾರು ಚಾಲಕನ ವಿರುದ್ಧ ಹಾಕಿರುತ್ತೇನೆ. ಅಪಘಾತವಾದ ದಿನ ಕಾರಿನ ವಿಮೆ ಚಾಲ್ತಿ ಇತ್ತು ಎಂದರೆ ಸರಿ. ಸದರಿ ವಿಮೆ ಚಾಲ್ತಿಯಲ್ಲಿ ಇರುವ ಕಾರಣ ಕಾರಿನ ಮಾಲೀಕರು ಪರಿಹಾರ ನೀಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

4 ನೇ ಎದುರುದಾರರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ.ಹಾಗೂ ಜೆಎಂಎಫ್‌ಸಿ,
ಧಾರವಾಡ.